


# ನಾದದ ನದಿ ಹರಿದದ ಅಲ್ಲಿಂದಿಲ್ಲಿಗೆ

■ ವಿಶಾಖ ಎನ್.

ಕೇರಳದ ಕೊಚ್ಚಿಯಲ್ಲಿ 'ಥೈಕುಡಮ್' ಎಂಬ ಸ್ಥಳ. ಅಲ್ಲೊಂದು ಸೇತುವೆ. 2013ರಲ್ಲಿ ಸಂಗೀತಮೋಹಿಗಳಾದ ಗೋವಿಂದ ವಸಂತ ಹಾಗೂ ಸಿದ್ಧಾರ್ಥ್ ಮೆನನ್ ಇಬ್ಬರೂ ಒಂದು ಬ್ಯಾಂಡ್ ಕಟ್ಟುವ ತೀರ್ಮಾನ ತೆಗೆದುಕೊಂಡದ್ದು ಅದೇ ಸೇತುವೆ ಬಳಿ. ತಮ್ಮ ಸಂಗೀತ ತಂಡಕ್ಕೆ ಅವರಿಟ್ಟ ಹೆಸರು 'ಥೈಕುಡಮ್ ಬ್ರಿಡ್ಜ್'. ಕನ್ನಡದ 'ಕಾಂತಾರ' ಸಿನಿಮಾ ಸದ್ದು ಮಾಡುತ್ತಿರುವ ಈ ಹೊತ್ತಿನಲ್ಲಿ ಇದೇ ಕೇರಳ ಬ್ಯಾಂಡ್‌ನ ಸ್ವರ ಸಂಯೋಜನೆಯೊಂದು ದಿಢೀರನೆ ಮುನ್ನೆಲೆಗೆ ಬಂದಿದೆ. 2015ರಲ್ಲಿ ಬಿಡುಗಡೆ ಮಾಡಿದ್ದ 'ನವರಸಂ' ಎಂಬ ಹಾಡೀಗ ಅಸಂಖ್ಯ ಇಯರ್‌ಫೋನ್‌ಗಳಲ್ಲಿ ಅನುರಣಿಸುತ್ತಿದೆ.

ತಾಂತ್ರಿಕ ಪರಿಭಾಷೆಯಲ್ಲಿ 160 ಬಿಪಿಎಂ (ಬೀಟ್ಸ್ ಪರ್ ಮಿನಟ್)ನಲ್ಲಿ ಸಿದ್ಧಗೊಂಡಿರುವ ಹಾಡು 'ನವರಸಂ'. ಆ ಹಾಡು 2015ರಲ್ಲಿಯೇ ಕಪ್ಪ ಎಂಬ ಕೇರಳದ ವಾಹಿನಿಯ 'ಮೋಜೊ' ಕಾರ್ಯಕ್ರಮದಲ್ಲಿ ಪ್ರಸಾರಗೊಂಡಿತ್ತು. ಇಡೀ ಹಾಡು ಭೂತದ ವೇಷ ಕಟ್ಟುವವರ ಕುಟುಂಬದ ಭಾವನೆಗಳನ್ನು ಕೇಂದ್ರೀಕರಿಸಿ ಚಿತ್ರಿತವಾಗಿತ್ತು. ಶಾಲಾ ಬಾಲಕ ಅದರ ಕೇಂದ್ರ ಪಾತ್ರ. ದುರಂತವೊಂದನ್ನು ಅನಾವರಣಗೊಳಿಸುತ್ತಲೇ ಕೇರಳದ ಮಣ್ಣಿನ ಸಂಸ್ಕೃತಿಗೆ ಕನ್ನಡಿ ಹಿಡಿಯುವ ಹಾಡು ಇದು. ಆ ಹಾಡಿನ ಎಷ್ಟೋ ದೃಶ್ಯಗಳ ಲಯವನ್ನು ಕೂಡ ರಿಷಬ್ ಶೆಟ್ಟಿ 'ಕಾಂತಾರ' ಸಿನಿಮಾದಲ್ಲಿ ಬಳಸಿಕೊಂಡಿರುವುದು ಎದ್ದು ಕಾಣುತ್ತದೆ. ಅಲ್ಲಿ ಭೂತಾರಾಧನೆ ವಸ್ತು. 'ಕಾಂತಾರ'ದಲ್ಲಿ ಪಂಜುರ್ಲಿಯ ದೈವಾರಾಧನೆ. ಕಳೆದ ಐದು ವರ್ಷದ ಹಿಂದೆ 'ಥೈಕುಡಮ್ ಬ್ರಿಡ್ಜ್' ತಂಡದ ಹಾಡನ್ನು ಯೂಟ್ಯೂಬ್‌ಗೆ ಹಾಕಿದರು. ಇದುವರೆಗೆ ಸುಮಾರು 37 ಲಕ್ಷ ಮಂದಿ ಈ ಹಾಡನ್ನು ಅಲ್ಲಿ ನೋಡಿದ್ದಾರೆ. ಮೂಲ ಹಾಡಿನಲ್ಲಿ ಪಿಟೀಲು ಬಳಕೆಯಾಗಿರುವ ಕಡೆ ನಾದಸ್ವರವನ್ನು ಅಜನೀಶ್ ಲೋಕನಾಥ್ ಬಳಸಿ, 'ಕಾಂತಾರ' ಚಿತ್ರದ ಹಾಡಾಗಿ ಮಾರ್ಪಾಡಿಸಿದ್ದಾರೆ.

ಬಹುತೇಕ ಹಾಡುಗಳ ಪ್ರತಿನಿಮಿಷದ ಬೀಟ್ ಪ್ರಮಾಣ ಸರಾಸರಿ 80 ಇರುತ್ತದೆ. 'ನವರಸಂ'ನಲ್ಲಿ ಅದನ್ನು ದುಪ್ಪಟ್ಟು ಮಾಡಿದ್ದು ಕೇಳುಗರನ್ನು ಥಟ್ಟನೆ ಸೆಳೆಯುವ ತಂತ್ರವೂ ಹೌದು; 'ಸ್ವಲ್ಪ ಸೌಂಡು ಜಾಸ್ತಿ ಮಾಡು ತುಂಬ ಒಳ್ಳೆ ಸಾಂಗಿದು' ಎಂದು ಯೋಗರಾಜ ಭಟ್ಟರು ಬರೆದಿದ್ದ ಸಾಲಿನಂತೆ.

ಗೋವಿಂದ ವಸಂತ, ಸಿದ್ಧಾರ್ಥ್ ಮೆನನ್ ಅಲ್ಲದೆ ಮಿಥುನ್ ರಾಜು, ಅನೀಶ್ ಟಿ.ಎನ್., ವಿಯಾನ್ ಫರ್ನಾಂಡಿಸ್, ವಿಪಿನ್ ಲಾಲ್, ಕ್ರಿಸ್ಟಿಯನ್ ಜೋಸ್, ಅಶೋಕ್ ನೆಲ್ಸನ್, ಅನೀಶ್ ಕೃಷ್ಣ ಮೊದಲಾದವರು 'ಥೈಕುಡಮ್ ಬ್ರಿಡ್ಜ್' ತಂಡದ ಭಾಗವಾಗಿದ್ದಾರೆ. ಮೆಟಲಗ ವಾದ್ಯಗಳನ್ನೇ ಹೆಚ್ಚಾಗಿ ಉಪಯೋಗಿಸಿ ಸ್ವರ ಸಂಯೋಜನೆ ಮಾಡಿ, ಕಾರ್ಯಕ್ರಮ ನೀಡುವ ಜಾಯಮಾನದ ಬ್ಯಾಂಡ್ ಇದು. ಇಂಡಿ ಪಾಪ್ ಹಾಗೂ ಕೆಲವು ಆಸಕ್ತಿಕರ ಫ್ಯೂಷನ್‌ಗಳನ್ನೂ ತಂಡ ನೀಡಿದೆ.

ಗೋವಿಂದ ವಸಂತ ತಮಿಳಿನ '96' ಸಿನಿಮಾದ ಸ್ವರ ಸಂಯೋಜಕ. ತಂದೆಯಿಂದ ರಕ್ತಗತವಾಗಿ ಸಂಗೀತದ ಗಂಧ ಪಡೆದಿರುವ ಅವರು, ಪಿಟೀಲುಮೋಹಿ. ಇಳಯರಾಜಾ ಶೈಲಿಯ ಸ್ವರ ಸಂಯೋಜನೆಯನ್ನು ಇಷ್ಟಪಡುವವರ ಪೈಕಿ.

ಕೇರಳದ ಗೋವಿಂದ '96' ಸಿನಿಮಾದಲ್ಲಿ ಅನೇಕ ಕಡೆ ಇಳಯರಾಜಾ ಸಂಯೋಜಿಸಿದ್ದ ಜನಪ್ರಿಯ ಸಿನಿಮಾ ಗೀತೆಗಳ ಕೆಲವು ತುಣುಕುಗಳನ್ನು ಚಿತ್ರಕಥೆಯ ಭಾಗವಾಗಿ ಮರುಬಳಕೆ ಮಾಡಿದ್ದರು. ಅದು ಸ್ವರ ಸಾಮ್ರಾಟನಿಗೆ ತಮ್ಮ ಉಡುಗೊರೆ ಎಂಬರ್ಥದಲ್ಲಿ ಅವರು ಮಾತನಾಡಿದ್ದರು. ಇಳಯರಾಜಾ ಮಾತ್ರ ಈ ನಡೆಯನ್ನು ಒಪ್ಪಿರಲಿಲ್ಲ. ಸಂದರ್ಶನವೊಂದರಲ್ಲಿ ಅವರು, 'ಸ್ವಂತ ಸಂಗೀತ ಹೆಣೆಯಲಾಗದವನು ಮಾತ್ರ ಇಂತಹ ಅಗ್ಗದ ಕೆಲಸ ಮಾಡುತ್ತಾನೆ' ಎಂದು ಕೋಪದಿಂದಲೇ ಪ್ರತಿಕ್ರಿಯೆ ನೀಡಿದ್ದರು. ಇಳಯರಾಜಾ ಮಾತನ್ನೂ ಕೆಲವರು ಟ್ರೋಲ್ ಮಾಡಿದ್ದರು. ಆಗ ಇನ್ನೊಂದು ವಿಡಿಯೊ ಮಾಡಿದ್ದ ಗೋವಿಂದ ವಸಂತ, ಇಳಯರಾಜಾ ಅವರದ್ದೇ ಇನ್ನೊಂದು ಗೀತೆಯ ಸ್ವರವನ್ನು ಪಿಟೀಲಿನಲ್ಲಿ ನುಡಿಸಿದ್ದರು. 'ಸದಾ ಅವರ ಸಂಗೀತಾಭಿಮಾನಿ' ಎಂಬ ಕ್ಯಾಪ್ಷನ್ ಹಾಕಿ, ಅದನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದರು.

ಈಗ 'ಕಾಂತಾರ' ಸಿನಿಮಾ ಸ್ವರ ಸಂಯೋಜಕ ಅಜನೀಶ್ ಲೋಕನಾಥ್ ಕದ್ದ ಸ್ವರಗಳ ಚರ್ಚೆ ನಡೆಯುತ್ತಿದೆ. ಗೋವಿಂದ ಕೇರಳದವರು. ಇಳಯರಾಜಾ ಅವರದ್ದು ತಮಿಳು ನೆಲದ ಬನಿ. ರಿಷಬ್ ಶೆಟ್ಟಿ ತುಳು ನೆಲದ ಸಂಸ್ಕೃತಿಯ ಸಿನಿಮಾ ಮಾಡಿ ಇದೀಗ ಗೆದ್ದಿದ್ದಾರೆ. ಸಂಗೀತದ ನವರಸಗಳು ಹೀಗೆ ನಾಡಿನಿಂದ ನಾಡಿಗೆ, ಎದೆಯಿಂದ ಎದೆಗೆ ಸತತವಾಗಿ ಹರಿಯುತ್ತಲೇ ಇರುತ್ತದೆ. ■

